SRI SIDDARAMAIAH:- There is nothing to deny. Even the statement is also very clear according to the agreement made by the Chief Minister.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಇವರು ಇದನ್ನು ಡಿನೇ ಮಾಡುವುದಿಲ್ಲ. ಇದು ಇವರ ಮೊಂಡುತನ. ಅವರು ಏನೊಂದು ಹಠವನ್ನು ಮಾಡುತ್ತಿದ್ದಾರೆ ಅದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಹಾಗೂ ಕಾಂಗ್ರೆಸ್ ಪಕ್ಷದ ಇತರ ಸದಸ್ಯರು ಸಭಾತ್ಯಾಗ ಮಾಡಿದರು.)

ಶ್ರೀ ಸಿದ್ದರಾಮಯ್ಯ:- ನಿಮಗೆ ಈ ವಿಚಾರ ಇತ್ಯರ್ಥವಾಗುವುದು ಇಷ್ಟವಿಲ್ಲವೆಂದು ಕಾಣಿಸುತ್ತದೆ; ಹೋಗಿ.

ಶ್ರೀ ಎಂ.ಸಿ. ನಾಣಯ್ಯ:- ನೀವು ಸಭಾತ್ಯಾಗ ಮಾಡುವುದಕ್ಕೇ ಈ ಸದನದ ಇಷ್ಟು ಸಮಯವನ್ನು ಕಳೆಯಬಾರದಿತ್ತು. ಅನಾವಶ್ಯಕವಾಗಿ, ರಾಜಕಾರಣವನ್ನು ಮಾಡಿ, ಈ ಸಭೆಯ ಸಮಯವನ್ನು ಏತಕ್ಕೆ ಕಳೆಯುತ್ತಿದ್ದೀರಿ? 5 ವರ್ಷದಿಂದ ಮಾಡದೇ ಇರುವಂಥ ಕೆಲಸವನ್ನು ಏತಕ್ಕೆ ಮಾಡುತ್ತಿದ್ದೇವೆ? ನಿಮಗೆ ಈ ಒಪ್ಪಂದ ಬೇಕಾಗಿಲ್ಲ, ರಾಜಕಾರಣವನ್ನು ಮಾಡುತ್ತಿದ್ದೀರಿ; ನೀವು ಹೀಗೆ ನಿಮ್ಮ ರಾಜಕಾರಣವನ್ನು ಮಾಡಿಕೊಂಡು ಹೋಗಿ;

ಶ್ರೀ ಸಿದ್ದರಾಮಯ್ಯ:- ರಾಜಕಾರಣವನ್ನು ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ, ಮಾಡಲಿ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ನೀರಾವರಿ ಮಂತ್ರಿಯವರು ಏನು ಹೇಳಿದರೆಂದರೆ, ನಿಮಗೆ ಅಷ್ಟೊಂದು ಅನುಮಾನ ಇದ್ದರೆ ಬನ್ನಿ ಆ ಸ್ಥಳಕ್ಕೆ ಹೋಗಿ ನೋಡೋಣ ಎಂದು. ನಾವು ಆಹ್ವಾನವನ್ನು ಕೊಟ್ಟು ಕರೆದರೆ ಇವರು ಹೊರಗಡೆ ಹೋಗುತ್ತಿದ್ದಾರೆ. ಇದು ಅವರ ಸೌಜನ್ಯ, ಅವರ ನೀತಿ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಇದೇ ಸ್ಟೇಟ್‌ಮೆಂಟನ್ನು ಡಿನೇ ಮಾಡಬೇಕೆಂಬ ವಿಚಾರಕ್ಕೆ ಸಂಬಂಧಪಟ್ಟಂತೆ ಅವರು ವಾಕೌಟ್ ಮಾಡುತ್ತಿದ್ದೇವೆಂಬುದನ್ನು ಸದನದ ಗಮನಕ್ಕೆ ತಂದಿದ್ದಾರೆ. ಯಾವುದನ್ನು ಡಿನೇ ಮಾಡಬೇಕು? ಇಲ್ಲ ಒಂದು ಪಾಯಿಂಟ್ ಎಂದರೆ "talking to newsmen they have also released water from Mettur Dam" ಎಂದು. ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿದರು, 23-24 ಟಿ.ಎಂ.ಸಿ. ನೀರು ಮೆಟ್ಟೂರು ಡ್ಯಾಂನಲ್ಲಿದೆ; ಅವರು ನೀರನ್ನು ಬಿಟ್ಟುಕೊಡುತ್ತಾರೆ ಎಂದು. ಅವರು ನೀರನ್ನು ಬಿಟ್ಟುಕೊಡುವುದನ್ನು ನಾವು ಡಿನೇ ಮಾಡಬೇಕೆ?

ಅಧ್ಯಕ್ಷರು:- ನಾನು ನಿಮ್ಮ ಕೆಲಸವನ್ನು ಸುಲಭ ಮಾಡುತ್ತೇನೆ. ಪತ್ರಿಕೆಗಳ ಮುಖಾಂತರ